putting one more question, Sir. Is it want of proper supervision or is it misappropriation? Will the Government be pleased to investigate and find out why this income is reduced considerably?

Mr. SPEAKER.—The Hon'ble Minister wants notice.

Private Cattle in the care of Animal Husbandry Department.

Q.—421. **Sri S. MUNISWAMIAH** (Bangalore North—Scheduled Castes).—Will the Government be pleased to state :—

(*a*) the number of private cattle that are now in the care of the Animal Husbandry Department in Hessarghatta;

(*b*) the amount levied per cattle per month;

(*c*) the total amount realised on this account since 1st April 1952 to 1st February 1953;

(*d*) the establishment charges incurred particularly under this head;

(*e*) the quantity of cowdung collected since 1st April 1952;

(*f*) the way this cowdung was disposed of; and

(*g*) the financial worth of the manure of cowdung so collected?

A.—**Sri H. SIDDAVEERAPPA** (Minister for Home and Industries).—

(*a*) 120.

(*b*) For cows or heifers Rs. 10 per mensem.

Calves Rs. 5 per mensem (up to 1 year of age)

Buffaloes Rs. 12 per mensem (Professional concerns).

Buffalo calves Rs. 9 per mensem (Professional concerns).

Buffaloes Rs. 15 per mensem (Non-professional concerns).

Buffalo calves Rs. 7 8–0 per mensem.

(*c*) Rs. 8,686.

(*d*) Rs. 5,350 2–0.

(*e*) 306 cart loads.

(*f*) Utilised for growing foodgrains on the Farm and the cultivation of green grass.

(*g*) Rs. 612.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಫಾರಂನಲ್ಲಿ 120 ದನಗಳಿಗೆ ಎಷ್ಟು ಎಕರೆ ಭೂಮಿ ಬಿಟ್ಟುಕೊಟ್ಟಿದ್ದೀರಿ?

ಶ್ರೀ ಎಚ್. ಸಿದ್ದವೀರಪ್ಪ.—ಖಚಿತವಾಗಿ ಗೊತ್ತಿಲ್ಲ, It is within about 500 acres.

ಶ್ರೀ ಆರ್. ಮುನಿಸ್ವಾಮಯ್ಯ.—ಖಾಸಗಿ ದನಗಳನ್ನೂ ನರ್ಸಾರದವರು ಮೇಯಿಸಬೇಕಾದ ಅವಶ್ಯಕತೆ ಇದೆಯೆ?

ಶ್ರೀ ಎಚ್. ಸಿದ್ದವೀರಪ್ಪ.—ಬೆಂಗಳೂರಿನ ನಾಗರಿಕರ ಅನುಕೂಲಕ್ಕೆ ಆ ರೀತಿ ಮಾಡಿದೆ. ಅದೂ ಅಲ್ಲದೆ ದುಡ್ಡು ಬರುತ್ತದೆ. It is a little paying section.

ಶ್ರೀ ಆರ್. ಮುನಿಸ್ವಾಮಯ್ಯ.—ಇಲ್ಲಿಂದ ಗೊಬ್ಬರ ಸಾಗಿ ಹೋಗುತ್ತಾ ಇದೆ ಎಂದು ಹೇಳುತ್ತಾರೆ, ನಿಜವೇ?

ಶ್ರೀ ಎಚ್. ಸಿದ್ದವೀರಪ್ಪ.—ಆಹಾರ ಧಾನ್ಯ ಬೆಳೆಯುವುದಕ್ಕೆ ಹೆಚ್ಚಾಗಿ ಗೊಬ್ಬರ ಹೋಗುತ್ತಾ ಇದೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಸಿರು ಹುಲ್ಲು ಬೆಳೆಯುತ್ತೀವೆ ಎಂದು ಹೇಳಿದ್ದೀರಿ. ಅದಕ್ಕೆ ಕೇಳಿದೆ.

ಶ್ರೀ ಎಚ್. ಸಿದ್ದವೀರಪ್ಪ.—ಹಸಿರು ಹುಲ್ಲು ಬೆಳೆದು ಸ್ಕ್ವಾಕ್‌ಮಾಡಿ 2 ರೂಪಾಯಿನಂತೆ concession rate ನಲ್ಲಿ ಕೊಡುತ್ತೀವೆ.

ಶ್ರೀ ಎಸ್. ಸಿದ್ದವೀರಪ್ಪ.—ಆ ಫಾರಮ್ಮಿನಲ್ಲಿ ತಯಾರಾಗತಕ್ಕ ಗೊಬ್ಬರವನ್ನು ಹೊರಗಡೆ ಇತರ ಜನಗಳಿಗೆ ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.—ಆ ರೀತಿ ಕೊಡುತ್ತಿಲ್ಲ ಎಂದು ಗೊತ್ತಾಗಿದೆ.

ಶ್ರೀ ಗೋರೂರು ಸಿದ್ದಪ್ಪ.—ಹಾಗೆ ಕೊಟ್ಟಿರುವುದನ್ನು ತಮ್ಮ ಗಮನಕ್ಕೆ ತಂದರೆ?

ಶ್ರೀ ಎಚ್. ಸಿದ್ದವೀರಪ್ಪ.—ತಂದಾಗ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೀವೆ.

ಶ್ರೀ ವಿ. ಮಸಿಯಪ್ಪ.—ಇಲ್ಲ ಸುಧಾರಿಸಿದ ನವೀನ ರೀತಿಯಲ್ಲಿ ಹುಲ್ಲುಬೆಳೆಯುವ ಏರ್ಪಾಡು ಮಾಡಲಾಗಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ವಿ. ಮಸಿಯಪ್ಪ.—ಆ ತರಹ ಹುಲ್ಲಿನ ಅವಶ್ಯಕತೆ ಇತರ ಕಡೆಗಳಿಗೂ ಇರುವುದರಿಂದ, ಆ ರೀತಿ ಬೆಳೆಯುವಂತೆ ಪ್ರಚಾರ ಮಾಡಲಿಕ್ಕೆ ಏರ್ಪಾಡು ಮಾಡಲಾಗಿದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಇದು ಎಕ್ಸ್‌ಪೆರಿಮೆಂಟಲ್ ಫಾರಂ. ಮಾನ್ಯ ಸದಸ್ಯರೂ ನೋಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ಇಲ್ಲಿ ಫಲಪ್ರದವಾದರೆ ಬೇರೆ ಕಡೆಗಳಿಗೆ ಪ್ರಾಪಗೇಟ್ ಮಾಡುತ್ತೀವೆ.

ಶ್ರೀ ಎಲ್. ಹುಚ್ಚಮಾಸ್ತಿಗೌಡ.—ಸ್ವಲ್ಪ ದುಡ್ಡು ಲಾಭ ಬರುತ್ತದೆ ಎಂದು ಹೇಳಿದಿರಿ. 500 ಎಕರೆ ಇದೆ. ಒಂದು ಎಕರೆ ಹುಲ್ಲಿಗೆ 7 ರೂಪಾಯಿನಂತೆ ಮಾರಿದ್ದೀರಿ ಎಂಬುದು ಅಂಕಿ ಅಂಶಗಳಿಂದ ಗೊತ್ತಾಗುವುದಿಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—500 ಎಕರೆ ಬರೀ ಹುಲ್ಲೇ ಅಲ್ಲ, ನಮ್ಮ ಫಾರಂನಲ್ಲೂ ಇರುವುದರಿಂದ ಅಷ್ಟು ಆಗುತ್ತದೆ.

ಶ್ರೀ ಎಲ್. ಹುಚ್ಚಮಾಸ್ತಿಗೌಡ.—ಇನ್ನೂ ಸ್ವಲ್ಪ ಹೆಚ್ಚು ದುಡ್ಡನ್ನು ಹಾಕುವುದು ಉತ್ತಮವಲ್ಲವೇ?

ಶ್ರೀ ಎಚ್. ಸಿದ್ದವೀರಪ್ಪ.—ನಿಮ್ಮ ಸಲಹೆಯನ್ನು ಯೋಚನೆ ಮಾಡುತ್ತೀವೆ.